

ಕೋರ್ಟ್ ಹೌಸ್



ಶ್ನೈಬ್ಲಿ ಹಿಲ್ ರೋಡ್

ಸ್ವರ್ಣ ನಿಸರ್ಗ

# ಸೆಡೋನಾ

**ಸೆಡೋನಾ ಎನ್ನುವುದು ಹೆಣ್ಣುಮಗಳೊಬ್ಬಳ ಹೆಸರು. ಆಕೆ ಆ ಊರಲ್ಲಿ ಪೋಸ್ಟ್‌ಮಾಸ್ಟರ್ ಆಗಿದ್ದವಳು. ಆಕೆಯ ಸೇವಾತತ್ಪರತೆಯ ಹಿನ್ನೆಲೆಯಲ್ಲಿ ಆ ಊರಿಗೇ ಆಕೆಯ ಹೆಸರಿಡಲಾಯಿತು!**

■ ಚಿತ್ರ– ಲೇಖನ:
**ಡಾ. ಎಂ. ಸತ್ಯನಾರಾಯಣರಾವ್**



ಮಡೋನಾ ಅಂಡ್ ಚೈಲ್ಡ್

ಎತ್ತರದ ಬೆಟ್ಟಗಳ ನಡುವೆ ಬೈತಲೆಯಂತೆ ಹರಿದು ಹೋಗುತ್ತದೊಂದು ದಾರಿ. ಆ ದಾರಿಯ ಹೆಸರು ಶ್ನೈಬ್ಲಿ ಹಿಲ್ ರೋಡ್. ದಾರಿಯ ಈ ಕಡೆ ಆ ಕಡೆ ಅಂಗಡಿಗಳು, ಹೋಟೆಲುಗಳು. ತಗ್ಗು ಏರುಗಳಲ್ಲಿ ಮಣ್ಣಿನ ಬಣ್ಣದ ಮನೆಗಳು, ಸುತ್ತಲೂ ಭಾರಿ ಬೆಟ್ಟಗಳು. ಇದೆಲ್ಲ ಸಿರಿ ಹೊತ್ತ ಆ ಸಣ್ಣ ಊರು ಸೆಡೋನಾ.

ಫೀನಿಕ್ಸ್ ನಿಂದ 120 ಮೈಲಿ, ಫ್ಲಾಗ್‌ಸ್ಟಾಫ್ (ವೀನಸ್ ಗ್ರಹವನ್ನು ಕಂಡುಹಿಡಿದದ್ದು ಇಲ್ಲಿಂದಲೇ. ಆದರೆ ನಂತರ ಅದು ಗ್ರಹವಲ್ಲ ಎಂದು ನಿರ್ಧಾರವಾಯಿತೆನ್ನಿ.) ನಿಂದ 50 ಮೈಲಿ. ಸೆಡೋನಾ ತಲುಪಲು ಬೆಟ್ಟಗಳ ಮೇಲೆಯೇ ಕಾರಿನಲ್ಲಿ ಸಾಗಬೇಕು. ಹೆದ್ದಾರಿ 89ಎ. ಸಾವಿರ ಅಡಿಗಳಿಗೂ ಮೀರಿದ ಎತ್ತರದ ಬೆಟ್ಟಗಳ ಸಾಲು. ಕೆಳಗೆ ಅಗಲವಾದ ಆಳ ಕಣಿವೆ. ಕಣಿವೆಯಲ್ಲಿ ಹರಿಯುವ ಕೊರಕಲು ಕೋಡಿ. ಎತ್ತರದ ಮರಗಳು, ಹುಲುಸು ಹುಲ್ಲುಗಾವಲು. ಅಲ್ಲಲ್ಲಿ ಟೆಂಟುಗಳು. ಕಾರು ಬೈಕು, ರಿಕ್ರಿಯೇಷನಲ್ ವಾಹನಗಳು. ಬೆಟ್ಟಗಳನ್ನು ಏರುತ್ತಾ ಇಳಿಯುತ್ತಾ ಕಾರಿನಲ್ಲಿ ಸಾಗಿದರೆ ದಾರಿ ಸೇರುವುದು ಆ ಶ್ನೈಬ್ಲಿ ಹಿಲ್ ರೋಡಿಗೆ. ಅದೇ ಸೆಡೋನಾ.

ಅಮೆರಿಕದ ಈ ಮರುಭೂಮಿ ಪ್ರದೇಶ, ಬೆಳೆ ಬೆಳೆಯದ ಬರಡು ಬೀಡು ಎನಿಸಿಕೊಂಡಿರುವ ರಾಜ್ಯ ಅರಿಜೋನಾದಲ್ಲಿರುವ ಒಂದು ಹಳ್ಳಿ ಸೆಡೋನಾ.

ಸೆಡೋನಾ ಒಂದು ಹೆಣ್ಣಿನ ಹೆಸರು. ಆಕೆಯ ಪೂರ್ತಿ ಹೆಸರು ಸೆಡೋನಾ ಅರಬೆಲ್ಲಾ ಶ್ನೈಬ್ಲಿ (1877–1950). ಆಕೆ ಆ ಗ್ರಾಮದ ಅಂದಿನ ಪೋಸ್ಟ್‌ಮಾಸ್ಟರ್. ತನ್ನ ಉತ್ತಮ ಜನಸೇವೆ, ಉಪಚಾರ, ಕಾರ್ಯ–ನಿರ್ವಹಣೆಯಿಂದ ಜನಮನ ಗೆದ್ದವಳು. ಅದಕ್ಕೇ ಗ್ರಾಮಕ್ಕೆ ಸೆಡೋನಾ ಎಂಬ ಹೆಸರು ಬಂತು.

ಸೆಡೋನಾ ಬಂಗಾರದ ಊರು! ಬಂಗಾರದ ಭ್ರಮೆ ಹುಟ್ಟಿಸುವ ಊರು! ಇಲ್ಲಿನ ಪ್ರಕೃತಿ ಸೌಂದರ್ಯ ಅಡಗಿರುವುದೇ ಇಲ್ಲಿನ ರೆಡ್ ರಾಕ್‌ಗಳಿಂದ! ಕೆಂಪು ಶಿಲೆಗಳು, ಕೆಂಪು ಬೆಟ್ಟಗಳು! ಸೂರ್ಯನ ಕಿರಣಗಳಿಗೆ ಬಂಗಾರದ ಬಣ್ಣ ಪಡೆಯುವ ಬೆಟ್ಟಗಳು! ಸೂರ್ಯೋದಯ ಹಾಗೂ ಸೂರ್ಯಾಸ್ತಮ ಸಮಯಗಳಲ್ಲಿ ಇಡೀ ಬೆಟ್ಟಗಳೇ ಬಂಗಾರದಂತೆ ಕಂಗೊಳಿಸುತ್ತವೆ. ಈ ಶ್ನೈಬ್ಲಿ ಹಿಲ್ಸ್ ಗಳು ಪದರ ಪದರವಾಗಿ ರಚನೆಯಾಗಿವೆ. ಮರಳು ಶಿಲೆಗಳು ಹಾಗೂ ಸುಣ್ಣದ ಶಿಲೆಗಳು. ಒಂದೊಂದು ಶಿಲಾ ಪದರವೂ ಒಂದೊಂದು ಬಣ್ಣ. ಸೆಡೋನಾ ಬೆಟ್ಟಗಳ ಗಾಢ ಕೆಂಪು ಕಲ್ಲುಗಳಿಗೆ ಕಾರಣ ಅದರಲ್ಲಿರುವ ಹಿಮಟೈಟ್ (ಕಬ್ಬಿಣದ ಆಕ್ಸೈಡ್); ಸರಳ ಅರ್ಥದಲ್ಲಿ ಹೇಳುವುದಾದರೆ ತುಕ್ಕು. ಅದು ಮರಳು ಶಿಲೆಗಳಿಗೆ ಲೇಪನ ನೀಡಿ ಆ ಬಣ್ಣ ಕೊಡುತ್ತದೆ.

ಲಕ್ಷಾಂತರ ವರ್ಷಗಳಿಂದ ರೂಪುಗೊಂಡಿರುವ ಕಲ್ಲುಗಳಿವು, ಬೆಟ್ಟಗಳಿವು. ಗಾಳಿ, ಮಳೆ ಹೊಡೆತದಿಂದ ಬೇರೆ ಬೇರೆ ಆಕಾರ, ರೂಪಗಳಲ್ಲಿ ಹೇಳಿ ಮಾಡಿಸಿದಂತಿವೆ! ಬೃಹತ್ ಬೆಲ್ ರಾಕ್ (ಗಂಟೆಯಂತಿರುವ ಬೆಟ್ಟ), ಕೆಥೆಡ್ರಲ್ ರಾಕ್ (ಚರ್ಚ್‌ನಂತಿರುವ ಬೆಟ್ಟ), ಕೋರ್ಟ್ ಹೌಸ್ (ದರ್ಬಾರು ಸಭಾಂಗಣದಂತಿರುವ ಬೆಟ್ಟ), ಬೇರ್ ರಾಕ್ (ಕರಡಿ ಕೂತಿರುವ ಆಕಾರ–ದಲ್ಲಿರುವ ಬೆಟ್ಟ), ಹಂಟರ್ ರಾಕ್! ಬೇಟೆಗಾರನ ಆಕಾರದಲ್ಲಿರುವ ಈ ಬೆಟ್ಟಕ್ಕೂ ಒಂದು ಕಥೆ ಇದೆ. ಬೇಟೆಗಾರ ಕರಡಿಯನ್ನು ಕೊಂದೇ ತೀರುತ್ತೇನೆ ಎಂದು ಹೊರಟನಂತೆ. ಆದರೆ ಅದೇ ಕರಡಿಯಿಂದ ಅವನು ಸತ್ತನಂತೆ. ಅದಕ್ಕೇ ಆ ಹೆಸರು. ಸ್ಟೀಮ್ ಬೋಟ್ ರಾಕ್ (ಸ್ಟೀಮ್ ಹಡಗಿನಂತಿರುವ ಬೆಟ್ಟ), ಸೆಡೋನಾ ರಾಕ್ (ಹೆಣ್ಣಿನ ಆಕಾರದ ಬೆಟ್ಟ), ಮೆಡೋನಾ ರಾಕ್, ನನ್ ರಾಕ್ಸ್ (ಇಬ್ಬರು ಕ್ರೈಸ್ತ ಸನ್ಯಾಸಿನಿ ಯರು ನಿಂತಿರುವಂತೆ ಎರಡು ಬೆಟ್ಟಗಳು ಪಕ್ಕ ಪಕ್ಕದಲ್ಲಿವೆ).. ಮತ್ತಿತರ ಹಲವಾರು ಬೆಟ್ಟಗಳು ಇಲ್ಲಿವೆ.

ಸೆಡೋನಾ ಕಲಾವಿದರ ಕಲಾಬೀಡು. ಇದು ಅರಿಜೋನಾದ 'ಲಿಟ್ಲ್ ಹಾಲಿವುಡ್' ಎಂದೇ ಪ್ರಸಿದ್ಧಿ! ಅರವತ್ತಕ್ಕೂ ಮಿಗಿಲಾಗಿ ಇಂಗ್ಲಿಷ್ ಚಿತ್ರಗಳು ಇಲ್ಲಿ ಚಿತ್ರೀಕರಣವಾಗಿವೆ. ಹಲವಾರು ಇತರ ಭಾಷೆಯ ಚಿತ್ರಗಳು ಹಾಗೂ ಡಾಕ್ಯುಮೆಂಟರಿಗಳೂ ಇಲ್ಲಿ ಚಿತ್ರೀಕರಣ ಕಂಡಿವೆ. ಜಾನಿ ಗಿಟಾರ್, ಏಂಜಲಾ ಆ್ಯಂಡ್ ಬ್ಯಾಡ್‌ಮ್ಯಾನ್, ಡೆಸರ್ಟ್ ಫೆರಿ, ಬ್ಲಡ್ ಆನ್ ದಿ ಮೂನ್, ಡೆಡ್ ಮ್ಯಾನ್, ಯೂನಿವರ್ಸಲ್ ಸೋಲ್ಜರ್, ಬ್ರೊಕನ್ ಆ್ಯರೋ, ಸ್ಟ್ರೇ ಅವೇ ಜೋ, ಕರಾಟೆ ಕಿಡ್ ಇತ್ಯಾದಿ. ಅಮೆರಿಕಾ ಸಿನಿಮಾಗಳಿಗೆ ಒಂದು ಸ್ಥಾನಮಾನ ಕೊಟ್ಟಿದ್ದೇ ಈ ಸೆಡೋನಾ. ಅಮೆರಿಕದ ಸಿನಿಮಾ ರಂಗದವರು ಮರೆಯಲಾಗದ ಊರು ಸೆಡೋನ.

ಬರಡು ಬೀಡು ಎನಿಸಿಕೊಂಡಿರುವ ಸೆಡೋನಾ ಜನರಿಗೆ ಪ್ರಾಕೃತಿಕ ವೈಚಿತ್ರ್ಯವೇ ಮುಖ್ಯ ಜೀವನಾಧಾರ! ಪ್ರವಾಸಿಗರಿಂದಲೇ ಅವರ ಬದುಕು. ಇಲ್ಲಿ ಓಡಾಡಲು ಟೂರಿಸ್ಟ್ ಬಸ್ಸುಗಳಿವೆ. ಬಾಡಿಗೆ ಕಾರುಗಳಿವೆ, ಹೆಲಿಕಾಪ್ಟರ್ ಹಾಗೂ ಸಣ್ಣ ಸಣ್ಣ ವಿಮಾನಗಳೂ ಇವೆ. ●